
‘ಇಲ್ಲ! ನನಗೆ ಈ ಯಾವ ವಿಚಾರವೂ ಇಲ್ಲ. ರಿತಿಕ್ ನನ್ನ ಮಿತ್ರ, ಇದಕ್ಕಿಂತ ಬೇರೇನೂ ಇಲ್ಲ,’ ನಾನು ಅಮ್ಮನಿಗೆ ಆಶ್ವಾಸನೆಯನ್ನು ಕೊಟ್ಟಿದ್ದೆ. ನನಗೆ ವಾಸ್ತವವಾಗಿಯೂ ರಿತಿಕ್‌ನನ್ನು ಮದುವೆಯಾಗುವ ಇಚ್ಛೆ ಇರಲಿಲ್ಲ. ಅವನೊಂದಿಗೆ ವಿವಾಹವಿಲ್ಲದೆಯೂ ಇರಬಲ್ಲಳಾಗಿದ್ದೆ. ಇದರಿಂದ, ಒಂದು ವೇಳೆ ಅವನು ನನಗೆ ಯಾವುದೇ ವಿಧದ ದುಃಖವನ್ನುಂಟು ಮಾಡಿದರೆ, ನಾನು ಬಹು ಸುಲಭವಾಗಿ ಅವನನ್ನು ಬಿಡಬಹುದಾಗಿತ್ತು.

ಓಹ್! ನಾನೆಷ್ಟು ಮೂರ್ಖಳಾಗಿದ್ದೆ. ‘ಬಿಡುವುದು’ ಸುಲಭವಲ್ಲ.

‘ನೋಡು ಸುಗಂಧಾ, ಎಲ್ಲವನ್ನು ಯೋಚಿಸಿ ಮಾಡು, ನೀನೀಗ ದೊಡ್ಡವಳಾಗಿದ್ದೀಯ, ನಿನ್ನ ಒಳಿತುಕೆಡುಕನ್ನು ನೀನೇ ನಿರ್ಧರಿಸಬಲ್ಲೆ’ ಎಂದಿದ್ದರು ಅಮ್ಮ.



‘ಅಮ್ಮಾ, ನೀವು ಚಿಂತೆ ಮಾಡ್ಬೇಡಿ’ ನಾನು ಅಮ್ಮನ ಎರಡೂ ಕೈಗಳನ್ನು ಹಿಡಿದುಕೊಂಡು ಹೇಳಿದ್ದೆ. ನಂತರ ಕೇಳಿದ್ದೆ, ‘ಅಮ್ಮಾ! ಸೆಲಟ್ ಅಂಕಲ್ ಅವರ ಭೇಟಿ ಆಗ್ತಾ ಇರುತ್ತ?’

‘ಇಲ್ಲ! ಆ ಚಾಪ್ಟರ್ ಮುಗಿದು ಹೋಗಿದೆ, ಹೆಣ್ಣಿಗೆ ಒಂದಲ್ಲ ಒಂದು ಆಸರೆಯ ಅವಶ್ಯಕತೆ ಉಂಟಾಗುತ್ತೆ, ಆಗ ನನಗೂ ಬೇಕಿತ್ತು, ಏಕೆಂದರೆ ಬೇರಾವ ಮಾರ್ಗವಿರಲಿಲ್ಲ, ನಾನು ಒಂಟಿಯಾಗಿದ್ದರೆ ಬಹುಶಃ ಅವರ ಪ್ರಸ್ತಾವವನ್ನು ಒಪ್ಪಿಕೊಳ್ಳುತ್ತಿರಲಿಲ್ಲ.’

‘ನನ್ನೊಂದಿಗೆ ನಿನ್ನ ಜೀವನ ಕಲೆತಿತ್ತು, ನಿನ್ನ ಜೀವನವನ್ನು ರೂಪಿಸುವುದು ನನ್ನ ಜವಾಬ್ದಾರಿಯಾಗಿತ್ತು.’ ಅಮ್ಮ ಸ್ಪಷ್ಟತೆಯನ್ನು ಕೊಡುತ್ತಾ ಹೇಳಿದರು. ಕೀರ್ತಿ ಮಕ್ಕಳಿಂದಾಗಿ ಕಚೇರಿಗೆ ಬರುವುದು ತಡವಾಗುತ್ತಿತ್ತು ಎಂದು ನೆಪ ಹೇಳುತ್ತಿದ್ದಳು; ಅಮ್ಮ ಸಹ ಇಂಥ ನೆಪವನ್ನು ಮಾಡುತ್ತಿರುವಳೇ? ನನ್ನ ಪೋಷಣೆಗೆ ಸೆಲಟ್ ಅಂಕಲರ ಪ್ರಸ್ತಾವವನ್ನು ಅಮ್ಮ ಒಪ್ಪಿದ್ದರೆ? ಅಮ್ಮನಿಗೆ ಸೆಲಟ್ ಅಂಕಲರೊಂದಿಗೆ ಪ್ರೀತಿ ಇರಲಿಲ್ಲವೇ? ನಾನು ಕೇಳಬೇಕೆಂದಿದ್ದೆ, ಆದರೆ ಮೌನ ವಹಿಸಿದೆ. ನನ್ನ ಈ ಪ್ರಶ್ನೆಯಿಂದ ಅಮ್ಮ ಬಹುಶಃ ತಮ್ಮನ್ನು ತಾವು ಅವಮಾನಕ್ಕೊಳಗಾಗುವುದನ್ನು ಮನಗಾಣುತ್ತಿದ್ದರು. ಕೆಲವು ಪ್ರಶ್ನೆಗಳು ಅನುತ್ತರಿತವಾಗಿರುವುದೇ ಲೇಸು.

ಅಮ್ಮ ಎರಡು ದಿನಗಳ ನಂತರ ಭೋಪಾಲ್‌ಗೆ ಹೊರಟು ಹೋದರು. ನಾನು ಸಹ ನನ್ನ ನೌಕರಿಯಲ್ಲಿ ವ್ಯಸ್ತಳಾದೆ. ರಿತಿಕ್ ನನ್ನನ್ನು ಭೇಟಿಯಾಗುವುದು, ಪ್ರತಿದಿನ ಸಂಜೆ ಅವನು ನನ್ನ ಮನೆಗೆ ಬರುವುದು ಮಾತ್ರ ನಿಲ್ಲಲಿಲ್ಲ. ಇಲ್ಲಿ ಸಹ ನೆರೆಹೊರೆಯವರಿದ್ದರು; ಅವರ ದೃಷ್ಟಿಕೋನ ಸಹ ಹಳೆಯ ನೆರೆಮನೆಯವರಿಗಿಂತ ಭಿನ್ನವಾಗಿರಲಿಲ್ಲ.

‘ಸಂಜೆ ಬರ್ತಾರಲ್ಲ, ಅವರ್ಯಾರು? ನಿಮ್ಮ ಸಂಬಂಧಿಕರೇ?’ ಅದೊಂದು ದಿನ ಹೊಸ ನೆರೆಮನೆಯವಳು ನನ್ನನ್ನು ಕೇಳಿದಳು.

‘ಅವರು ನನ್ನ ದತ್ತಕ ಸಹೋದರರು.’ ಹಿಂದಿನ ಅನುಭವಗಳಿಂದ ಶಿಕ್ಷಣ ಪಡೆದ ನಾನು ಸುಳ್ಳಿನ ಆಸರೆ ಹಿಡಿದಿದ್ದೆ. ಜಗತ್ತು ಈ ಸುಳ್ಳನ್ನೇ ಕೇಳಲು ಬಯಸುತ್ತದೆ.

‘ತುಂಬಾ ಒಳ್ಳೆಯವರು, ನಿಮ್ಮ ಬಗ್ಗೆ ತುಂಬಾ ಗಮನ ಕೊಡ್ತಾರೆ’, ನೆರೆಮನೆಯವಳು ಮುಂದಕ್ಕೆ ಕೇಳಿದಳು, ‘ಅವರಿಗೆ ಮದುವೆಯಾಗಿದೆಯಾ?’

‘ಇನ್ನೂ ಇಲ್ಲ. ಒಂದೆರಡು ಕಡೆ ಮಾತುಕತೆ ನಡೀತಿದೆ’, ನಾನು ಎರಡನೆಯ ಸುಳ್ಳನ್ನು ಹೇಳಿದೆ.

‘ಅವರಿಗೆ ಸಹ ಸಾಕಷ್ಟು ವಯಸ್ಸಾಗಿದೆ, ಸುಮಾರು ಮೂವತ್ತೈದು, ನಲ್ವತ್ತರ ಸಮೀಪವಿರಬೇಕು?’

ಅವಳು ‘ಸಹ’ದ ವಿಶೇಷಣ ಹಾಕುತ್ತಾ ಪ್ರಶ್ನೆ ಮಾಡಿದಳು. ಈ ‘ಸಹ’ ಸಹ ನನ್ನ ಬಗ್ಗೆ ಹೇಳಲಾಗಿದೆ ಎಂದುದನ್ನು ನಾನು ಅರ್ಥ ಮಾಡಿಕೊಂಡೆ. ಅವಳು ನನ್ನನ್ನು ನನ್ನ ವಯಸ್ಸಿಗಿಂತ ಹೆಚ್ಚು ಅಳೆದು ನನ್ನನ್ನು ಗೇಲಿ ಮಾಡುತ್ತಿದ್ದಳು.

‘ಹೌದು, ಅವರು ವಯಸ್ಸಿನಲ್ಲಿ ನನಗಿಂತ ದೊಡ್ಡವರು, ಬನ್ನಿ, ಒಂದೊಂದು ಕಪ್ ಚಹಾ ಕುಡಿಯೋಣ’, ನಾನು ವಿಷಯಾಂತರ ಮಾಡಿದ್ದೆ. ಅಂದಿನಿಂದ ನಾನು ಬೇರೆಯವರ ಎದುರು ರಿತಿಕ್‌ಗೆ ‘ಅಣ್ಣಾ’ ಎಂದು ಸಂಬೋಧಿಸಲು ಆರಂಭಿಸಿದೆ. ಜನ ನನ್ನನ್ನು ರಿತಿಕ್ ಮತ್ತು ನನ್ನ ಸಂಬಂಧಗಳ ಬಗ್ಗೆ ಸುಳ್ಳು ಹೇಳಲು ಬಾಧ್ಯಗೊಳಿಸುತ್ತಿದ್ದರು; ನಾನು ಇಷ್ಟವಿಲ್ಲದಿದ್ದಾಗ್ಯೂ ಬಾಧ್ಯಳಾಗುತ್ತಿದ್ದೆ. ನಾನು ದುರ್ಬಲಳಾಗಿರಲಿಲ್ಲ. ಆದರೆ ವಿವಾದದಲ್ಲಿ ಸಿಲುಕಿಕೊಳ್ಳಲು ಬಯಸುತ್ತಿರಲಿಲ್ಲ. ನಾನು ಬಯಸಿದ್ದಾಗ್ಯೂ, ರಿತಿಕ್ ನನ್ನ ಮಿತ್ರ, ನನ್ನ ಪ್ರೇಮಿ ಎಂದು ಹೇಳುವ ಧೈರ್ಯ ನನ್ನಿಂದ ಮಾಡಲಾಗುತ್ತಿರಲಿಲ್ಲ. ಇದರ ಪರಿಣಾಮ ಏನಾಯಿತೆಂದರೆ, ರಾತ್ರಿಯ ಒಂಬತ್ತು ಗಂಟೆಯಾಗುತ್ತಲೇ ನನ್ನ ದೃಷ್ಟಿ ಗಡಿಯಾರದ ಮೇಲೆ ಬೀಳುತ್ತಿತ್ತು. ಈಗ ತಡರಾತ್ರಿಯಾಗಿದೆ, ಈಗ ರಿತಿಕ್ ಹೋಗಬೇಕು ಎಂದು ಅನ್ನಿಸುತ್ತಿತ್ತು.